

ಪೆಲತ್ತಡಿ ಜಲಪಾತ

# ಗಡಿನಾಡಿನ ಜಲಪಾತಗಳು

■ ಚಿತ್ರ ಬರಹ:
**ಪ್ರಶಾಂತ ರಾಜ ವಿ. ಟಿ. ಅಡೂರು**

ಗಡಿನಾಡು ಕಾಸರಗೋಡಿನಲ್ಲಿ ಅನೇಕ ಜಲಪಾತಗಳಿವೆ. ಶಾಂತ ಪ್ರಕೃತಿಯ ಐಸಿರಿಯ ಸೊಬಗು ವರ್ಣನಾತೀತ. ಅದರಲ್ಲೂ ಚಾರಣಗರಿಗೆ ಜಲಪಾತಗಳು ಇನ್ನಷ್ಟು ಹತ್ತಿರ. ಶ್ವೇತವರ್ಣದ ಜಲರಾಶಿ, ಕಪ್ಪನೆಯ ಕಲ್ಲಿನ ಮೇಲೆ ಕುಪ್ಪಳಿಸುತ್ತಾ ಧುಮ್ಮಿಕ್ಕುವ ಸೌಂದರ್ಯ ಕಣ್ಮನ ತಣಿಸುತ್ತದೆ. ಕಾಸರಗೋಡಿನ ಅಂತಹಾ ಅನೇಕ ಜಲಪಾತಗಳು ಇನ್ನೂ ಕೇರಳ ಪ್ರವಾಸೋದ್ಯಮ ಇಲಾಖೆಯ ಕಣ್ಣಿಗೆ ಬೀಳದೆ ಅಜ್ಞಾತವಾಗಿಯೇ ಇವೆ.

ಕಾಸರಗೋಡು ತಾಲ್ಲೂಕಿನ ಮುಳ್ಳೇರಿಯಾ ಸಮೀಪದ ಬೆಳ್ಳೂರಿನ ಕಲ್ಲೇರಿಮೂಲೆ ಜಲಪಾತಕ್ಕೆ ಹೊರನಾಡಿನ ಪ್ರವಾಸಿಗರು ಬರುವುದೇ ಇಲ್ಲ. ಪ್ರಾದೇಶಿಕ ಶಿಕ್ಷಣ ಕೇಂದ್ರದ ಕೆಲ ವಿದ್ಯಾರ್ಥಿಗಳು ಅಥವಾ ನಾಗರಿಕರು ಆಗಾಗ ಬೇಸರ ಕಳೆಯಲು ಆಗಮಿಸುತ್ತಾರೆ. ಎತ್ತರದಿಂದ ಧುಮುಕುವ ಜಲರಾಶಿಯಲ್ಲಿ ಮನದಣಿಯೆ ನೀರಾಟ ಆಡುತ್ತಾರೆ. ಬೃಹತ್ ಬಂಡೆಗಳ ಸೆರೆಯಿಂದ ಬಿರುಸಿನ ಮಳೆಗೆ ಭೋರ್ಗರೆಯುತ್ತಾ ಹರಿಯುವ ಈ ಜಲಪಾತವು ತಪ್ಪಲಿನ ಅನೇಕ ಕೃಷಿಭೂಮಿಗಳಿಗೆ ಸಮೃದ್ಧ ನೀರನ್ನು ಒದಗಿಸುತ್ತದೆ. ಪ್ರತೀ ವರ್ಷವೂ ಜೂನ್‌ನಿಂದ ಡಿಸೆಂಬರ್ ತನಕ ಇಲ್ಲಿ ಸಮೃದ್ಧ ನೀರಿನ ಹರಿವು ಇರುತ್ತದೆ.

ಜಿಲ್ಲೆಯ ಬದಿಯಡ್ಕದಿಂದ ಪೆರ್ಲಕ್ಕೆ ಸಾಗುವ ರಾಜ್ಯ ರಸ್ತೆಯ ಪೆಲತ್ತಡಿಯ ರಸ್ತೆ ಬದಿಯಲ್ಲಿ ಕಂಡುಬರುವ ನೀರಿನ ಝರಿಯೂ ಪ್ರಕೃತಿಪ್ರಿಯರನ್ನು ಆಕರ್ಷಿಸುತ್ತದೆ. ಎತ್ತರದ ಗುಡ್ಡದಿಂದ ಬಳುಕುತ್ತಾ ಇಳಿದು ಬರುವ ಪೆಲತ್ತಡಿ ಜಲಪಾತವು ಅನೇಕ ಎಕರೆಗಳಷ್ಟು ಕೃಷಿಭೂಮಿಗೆ ನೀರುಣಿಸುತ್ತದೆ. ಈ ರಸ್ತೆಯಲ್ಲಿ ಸಾಗುವ ಯಾತ್ರಿಕರಿಗೆ ಆಹ್ಲಾದಕರ ಅನುಭವ. ಈ ಜಲಪಾತವೂ ಹೆಚ್ಚು ಪ್ರಚಾರ ಪಡೆದಿಲ್ಲ.

ಜಿಲ್ಲೆಯ ಪೆರ್ಲ ಸಮೀಪದ ಪಡ್ರೆ ವಾಣಿನಗರದ ಸರೋಳಿಮೂಲೆಯಲ್ಲಿರುವ ಜಲಪಾತಕ್ಕೂ ಪ್ರವಾಸಿಗಳು ಬರುವುದು ಕಡಿಮೆ. ಇಲ್ಲಿನ ಸ್ವಚ್ಛ ವಾತಾವರಣ, ಸುಂದರ ದೃಶ್ಯಗಳನ್ನು ಇಲ್ಲಿಗೆ ಬಂದೇ ಸವಿಯಬೇಕು. ●



ಕಲ್ಲೇರಿಮೂಲೆ ಜಲಪಾತ